ಓ.ಎಸ್. ನಂಃ **28/2011**
ಡಿ.ಡಬ್ಲ್ಯೂಃ **1**

ದಿನಾಂಕ **24-01-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ: ಶ್ರೀ ವೈ. ವಿವಿ ವಕೀಲರಿಂದಃ

ನನ್ನ ತಂದೆ 1962 ರಲ್ಲಿ ನಮ್ಮ ಕುಟುಂಬದ ಆಸ್ತಿಗಳಲ್ಲಿ ವಿಭಾಗ ಮಾಡಿರುತ್ತಾರೆ. ಸದರಿ ವಿಭಾಗದಲ್ಲಿ ನಿಮ್ಮ ಪಾಲಿಗೆ ಬಂದಿರುವ ಆಸ್ತಿಗಳ ಸರ್ವೆ ನಂಬರು ಹಾಗೂ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರ ಗೋಪಾಲಸಿಂಗ್ ರವರ ಪಾಲಿಗೆ ಹೋಗಿರುವ ಆಸ್ತಿಗಳ ವಿವರ ಸಹ ನನಗೆ ನೆನಪಿಲ್ಲ. ನನ್ನ ತಂದೆಯ ಪಾಲಿಗೂ ಸಹ ಕೆಲವು ಆಸ್ತಿ ಹೋಗಿದ್ದವು ಆದರೆ ನನಗೆ ಅವುಗಳ ವಿವರ ನೆನಪಿಲ್ಲ. ವಿಭಾಗದಲ್ಲಿ ನಿಮ್ಮ ತಾಯಿಯ ಪಾಲಿಗೆ ಯಾವ ಆಸ್ತಿಗಳನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಹೋದಯರಾದ ಜುಗುಣಾಬಯಿ ರವರು ಹಾಗೂ ವಾದಿ ಪ್ರಮೀಳಾ ರವರಿಗೆ ಯಾವ ಆಸ್ತಿಗಳು ಹೋಗಿದ್ದವು ಎಂದರೆ ಸಾಕ್ಷಿ ಅವರ ಪಾಲಿಗೆ ಯಾವುದೇ ಆಸ್ತಿ ಹೋಗಿಲ್ಲ ಎಂದು ನುಡಿಯುತ್ತಾರೆ. 1962 ರಲ್ಲಿ ಆಗಿರುವ ವಿಭಾಗದ ಬಗ್ಗೆ ನಿಮಗೆ ಯಾವ ವರ್ಷದ ವರೆಗೆ ನೆನಪು ಇತ್ತು ಅಥವಾ ಮಾಹಿತಿ ಇತ್ತು ಎಂದರೆ ಸಾಕ್ಷಿ ಯಾವಾಗಲೂ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. (ಯಾವಾಗ ಮರೆತು ಹೋಗಿದೆ ಎನ್ನುವ ಪ್ರಶ್ನೆ ಸಮಂಜಸವಾಗಿರುವುದಿಲ್ಲ ಎಂದು ಹೇಳಿದರೂ ಸಹ ವಾದಿ ಪರ ವಕೀಲರು ಒತ್ತಾಯ ಮಾಡಿರುವುದರಿಂದ ಕಡತದ ಮೇಲೆ ತೆಗೆದುಕೊಳ್ಳಲಾಗಿದೆ).

2. ಸಾಕ್ಷಿಗೆ ಈಗ ಅವರ ದಿನಾಂಕ 19.08.2014 ರ ಪ್ರಮಾಣ ಪತ್ರದಲ್ಲಿನ ಸಹಿಯನ್ನು ತೋರಿಸಲಾಗಿ ಸಾಕ್ಷಿ ತಮ್ಮ ಸಹಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಅದೇ ರೀತಿ ನಿಪಿ-9 ರ ದಾಖಲೆಯ ಕೊನೆಯ ಪುಟದಲ್ಲಿನ ತಮ್ಮ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದು ತಮ್ಮ ಸಹಿ ಆಗಿರುತ್ತದೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ದಿನಾಂಕ 18.02.2015 ರ ತಮ್ಮ ಪಾಟೀ ಸವಾಲಿನಲ್ಲಿನ ತಮ್ಮ ಸಹಿಗಳನ್ನು ಸಹ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಈಗ ನಿಪಿ-9 ರ ದಾಖಲೆಯಲ್ಲಿನ ಪ್ರತೀ ಪುಟದಲ್ಲಿನ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ-9(ಸಿ), 9(ಡಿ), 9(ಇ), 9(ಎಫ್) ಮತ್ತು 9(ಜಿ) ಎಂದು ಗುರುತಿಸಲಾಯಿತು. 1962 ರಲ್ಲಿ ನನ್ನ ತಂದೆ ವಿಭಾಗ ಮಾಡಿಕೊಟ್ಟಿರುವುದನ್ನು ತೋರಿಸಲು ದಾಖಲೆಗಳು ಇದ್ದು ಅವುಗಳನ್ನು ಈಗಾಗಲೇ ಹಾಜರು ಮಾಡಿರುತ್ತೇನೆ. ಸದರಿ ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ ಬಂದಿದ್ದ ಆಸ್ತಿಗಳು ಅವರ ಮರಣದ ನಂತರ ಯಾರಿಗೆ ವಾರಸಾ ಆಗಿದ್ದಾವೆ ಎಂದರೆ ಸಾಕ್ಷಿ ಯಾರಿಗೂ ಆಗಿಲ್ಲ, ಅವುಗಳು ನನ್ನ

ತಾಯಿಯ ಹೆಸರಿನಲ್ಲಿ ಇದ್ದಾವೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿನಲ್ಲಿನ ಆಸ್ತಿಗಳು ಅವರ ಮರಣದ ನಂತರ ನನ್ನ ತಾಯಿಯ ಹೆಸರಿಗೆ ವರ್ಗಾವಣೆ ಆಗಿರುವುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ.

3. ಗುರುಮಠಕಲಿನ ಸರ್ವೆ ನಂ.329 ರಲ್ಲಿನ 19 ಎಕರೆ 32 ಗುಂಟೆ ಜಮೀನು ವಿಭಾಗದಲ್ಲಿ ನಿಮ್ಮ ಪಾಲಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಸರಿ, ನನ್ನ ಅಕ್ಕನ ಗಂಡ ಮೋಸ ಮಾಡಿ ತಪ್ಪಾಗಿ ವಿಭಾಗ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಪೈಕಿ ನಾನು 02 ಎಕರೆಯನ್ನು ಮಾರಾಟ ಮಾಡಿರುತ್ತೇನೆ. ವಿಭಾಗದಲ್ಲಿ ನನಗೆ ಬಂದ ನನ್ನ ಸ್ವಂತ ಆಸ್ತಿ ಆಗಿರುವುದರಿಂದ ಆ ಪೈಕಿ 02 ಎಕರೆ ಮಾರಾಟ ಮಾಡಿದ್ದೇನೆಂದರೆ ಸರಿ. ಸರ್ವೆ ನಂ.339 ರಲ್ಲಿನ ಜಮೀನು ಸಹ ನನ್ನ ಪಾಲಿಗೆ ಬಂದಿತ್ತು ಎಂದರೆ ಸರಿ, ಅದನ್ನು ಸಹ ನಾನು ಮಾರಾಟ ಮಾಡಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.339/1 ರಲ್ಲಿನ 01 ಎಕರೆ 29 ಗುಂಟೆ ಜಮೀನನ್ನು ಯಂಕಪ್ಪ ತಂದೆ ಈರಪ್ಪ ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿ ಅದು ನನ್ನ ಹಾಗೂ ನನ್ನ ಅಣ್ಣನ ಪಾಲಿಗೆ ಬಂದಿದ್ದು ನಾನು ಹಾಗೂ ನನ್ನ ಅಣ್ಣನ ಹೆಂಡತಿ ಸೇರಿ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ಹಾಗೂ ನನ್ನ ಅಣ್ಣನ ಹೆಂಡತಿ ಪ್ರತಿಬಾಲ ರವರ ಪಾಲಿಗೆ ಬಂದಿತ್ತು ಎಂದರೆ ಸರಿ. ಸರ್ವೆ ನಂ.351/2 ರಲ್ಲಿನ 22 ಗುಂಟೆ ಜಮೀನನ್ನು ನವಿತಾ ಕಂದೂರು ರವರಿಗೆ ಮರಾಟ ಮಾಡಿದ್ದೀರಿ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-9 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಹಿಂದಿ ಭಾಷೆಯಲ್ಲಿ ಇರುವ ಪ್ರತಿಬಾಲ ಎಂಬ ಪ್ರತೀ ಪುಟದಲ್ಲಿನ ಸಹಿಗಳನ್ನು ನೋಡಿ ಸಾಕ್ಷಿ ಅದು ತಮ್ಮ ಅಣ್ಣನ ಹೆಂಡತಿ ಪ್ರತಿಬಾಲ ರವರ ಸಹಿಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ತಾಯಿ ಅನಕ್ಷರಸ್ಥಳಾಗಿದ್ದು ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು ಎಂದರೆ ಸರಿ.

4. ನನ್ನ ತಾಯಿ ಮನೆಗೆಲಸದೊಂದಿದೆ ಕೃಷಿ ಮೇಲ್ವಿಚಾರಣೆ ಸಹ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಜಮೀನುಗಳಲ್ಲಿ ಗುರುಮಠಕಲ್ ಪಟ್ಟಣದ ಕನ್ನಡ ಮಾತನಾಡುವ ಜನರೇ ಕೆಲಸಕ್ಕೆ ಬರುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಸದರಿ ಜನರಿಂದ ಕೃಷಿ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಮನೆಗೆಲಸ ಮಾಡಿ ಮನೆಯಲ್ಲಿಯೇ ಇರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಕನ್ನಡ ಭಾಷ ಮಾತನಾಡಲು ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿಂದಿ ಹಾಗೂ ತೆಲುಗು ಮಾತ್ರ ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ. ಕಲಬುರಗಿಯ ಹಿರೆ ಔರಾದ್ ಗ್ರಾಮ ನನ್ನ ತಾಯಿಯ ತವರೂರು ಆಗಿರುತ್ತದೆ. ನನ್ನ ಒಬ್ಬ ಸಹೋದರಿಯನ್ನು ಗುರುಮಠಕಲಿನಲ್ಲಿಯೇ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ನನ್ನ ಇನ್ನೊಬ್ಬ ಸಹೋದರಿಯ ಗಂಡನ ಊರು

ತಾಳಿಕೋಟೆ ಆಗಿರುತ್ತದೆ ಎಂದರೆ ಸರಿ. ಅಂದರೆ ನನ್ನ ತಾಯಿಯ ಎಲ್ಲ ಸಂಬಂಧಿಕರು ಕರ್ನಾಟಕದಲ್ಲಿಯೇ ಇದ್ದಾರೆ ಎಂದರೆ ಸರಿ. ನನಗೆ ಚಿಕ್ಕ ವಯಸ್ಸಿನಿಂದಲೂ ಕನ್ನಡ ಬರುತ್ತದೆ ಎಂದರೆ ಸರಿ. ನನ್ನ ತಂದೆಯೂ ಸಹ ಕನ್ನಡ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಹಿಂದಿ ಹಾಗೂ ತೆಲುಗು ಮಾತನಾಡುತ್ತಿದ್ದರು ಎಂದು ನುಡಿಯುತ್ತಾರೆ. ವಾದಿ ಹಾಗೂ ನನ್ನ ಸಹೋದರಿ ಉಮಾಬಾಯಿ ರವರಿಗೂ ಕನ್ನಡ ಮಾತನಾಡಲು ಬರುತ್ತದೆ ಎಂದರೆ ಸರಿ. ನನ್ನ ತಾಯಿಗೆ ಕನ್ನಡ ಭಾಷೆ ಮಾತನಾಡಲು ಬರುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ಹಿಂದಿ ಮಾಧ್ಯಮದಲ್ಲಿ 4 ನೇ ತರಗತಿ ವರೆಗೆ ಓದಿದ್ದರು. ನನ್ನ ತಾಯಿ ಎಲ್ಲರೊಂದಿಗೆ ಕನ್ನಡದಲ್ಲಿಯೇ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

5. ಗುರುಮಠಕಲಿನ ನನ್ನ ಮನೆಯ ನಂಬರು ನನಗೆ ನೆನಪಿಲ್ಲ. ವಾದಿ ವಾಸವಾಗಿರುವ ಮನೆಯ ನಂಬರು ಸಹ ನನಗೆ ನೆನಪಿಲ್ಲ. ನನ್ನ ಹಾಗೂ ವಾದಿಯ ಮನೆಗಳು ಒಂದಕ್ಕೊಂದು ಹೊಂದಿಕೊಂಡಿವೆ. ಈಗ 10-12 ವರ್ಷಗಳಿಂದ ನಾನು ಹಾಗೂ ವಾದಿ ಆ ರೀತಿ ಬೇರೆ ಬೇರೆಯಾಗಿ ವಾಸವಾಗಿದ್ದೇವೆ. ನೀವು ಹಾಗೂ ವಾದಿ ವಿಭಾಗ ಆದ ನಂತರದಿಂದ ಬೇರೆ ಬೇರೆಯಾಗಿ ವಾಸವಾಗಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ವಿಭಾಗ ಆಗುವ ಮೊದಲಿನಿಂದಲೂ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 1986 ರಲ್ಲಿ ನನ್ನ ಮದುವೆಯಾದಾಗಿನಿಂದ ನಾವುಗಳು ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಮದುವೆಯಾದ ನಂತರ 7-8 ವರ್ಷಗಳ ವರೆಗೆ ನಾನು ಹಾಗೂ ವಾದಿಯು ಮತ್ತು ಇತರ ಸದಸ್ಯರು ಒಟ್ಟಾಗಿ ವಾಸವಾಗಿದ್ದೆವು. ಅಂದರೆ ನೀವುಗಳು 1992 ರಲ್ಲಿ ಬೇರೆ ಬೇರೆಯಾಗಿರುತ್ತೀರಿ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಿಮ್ಮಗಳ ನಡುವೆ ಹೊಂದಾಣಿಕೆ ಆಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ, ಎಲ್ಲರೂ ಚೆನ್ನಾಗಿ ಇದ್ದೆವು ಹಾಗೂ ಖುಷಿ-ಖುಷಿಯಾಗಿ ಬೇರೆ ಆಗಿದ್ದೆವು ಎಂದು ನುಡಿಯುತ್ತಾರೆ. ಆ ರೀತಿ ಬೇರೆಯಾದ ನಂತರ ನಾವೆಲ್ಲ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ ಎಂದರೆ ಸರಿ. ಆ ರೀತಿ ಬೇರೆಯಾದ ನಂತರ ನನ್ನ ತಾಯಿ ನನ್ನ ಸಹೋದರಿಯರಾದ ವಾದಿ ಹಾಗೂ ಜುಗುಣಬಾಯಿ ರವರೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಅಂದರೆ ಬೇರೆಯಾದ ನಂತರವೂ ಸಹ ನೀವೆಲ್ಲ ಕೂಡಿಯೇ ಇದ್ದೀರೇನು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂದರೆ ಈವರೆಗೂ ನೀವು ಕೂಡಿಯೇ ಇದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ.

6. 1992 ರಲ್ಲಿ ವಿಭಾಗ ಮಾಡಿಕೊಂಡು ದಾಖಲಾತಿ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಈ ಮೇಲೆ ನೋಡಿ ಗುರುತಿಸಿದ ನಿಪಿ-9(ಬಿ)

ರಿಂದ ನಿಪಿ-9(ಜಿ) ವರೆಗಿನ ಹಾಗೂ ನಿಮ್ಮ ಅತ್ತಿಗೆ ಪ್ರತಿಬಾಲ ರವರ ಸಹಿಗಳು ನೀವುಗಳು ವಿಭಾಗ ಪತ್ರಕ್ಕೆ ಮಾಡಿರುವ ಸಹಿಗಳಾಗಿರುತ್ತವೆ ಎಂದರೆ ಸಾಕ್ಷಿ ಒತ್ತಾಯ ಪೂರ್ವಕವಾಗಿ ನನ್ನ ಸಹಿ ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಒತ್ತಾಯ ಪೂರ್ವಕವಾಗಿ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ನಾನು ಯಾವುದೇ ದೂರು ಅಥವಾ ದಾಖಲೆ ಮಾಡಿಲ್ಲ. ನೀವು ಸ್ವಂತ ಇಚ್ಚೆಯಿಂದ ದಾಖಲೆಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಎಲ್ಲರೂ ಚೆನ್ನಾಗಿ ಇದ್ದೆವು ಆಗ ದಾಖಲೆ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ಎಲ್ಲರೂ ಚೆನ್ನಾಗಿ ಇದ್ದಾಗ ದಾಖಲೆ ಮಾಡಿಕೊಂಡು ನೀವು ಸಹ ಚೆನ್ನಾಗಿಯೇ ಇದ್ದು ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ಸರ್ವೆ ನಂ.135(ಎ), 132(ಎ), 137(ಅ), 394, 395 ಹಾಗೂ 319 (ಎ) ಆಸ್ತಿಗಳು ವಿಭಾಗದಲ್ಲಿ ನನ್ನ ತಾಯಿ ಹಾಗೂ ವಾದಿ ಮತ್ತು ಜುಗುಣಬಾಯಿ ರವರ ಪಾಲಿಗೆ ಹೋಗಿದ್ದವು ಎಂದರೆ ಸರಿಯಲ್ಲ. ಈ ಹಿಂದೆ ದಿನಾಂಕ 18.02.2015 ರಂದು ಸಾಕ್ಷಿ ತಮ್ಮ ಪಾಟೀ ಸವಾಲಿನಲ್ಲಿ ಈ ಮೇಲಿನ ಆಸ್ತಿಗಳು ತಮ್ಮ ತಾಯಿ ಹಾಗೂ ಸಹೋದರಿಯರಿಗೆ ಹೋಗಿದ್ದವು ಎಂದರೆ ನಿಜ ಎಂದು ನುಡಿದಿದ್ದು, ಅದನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಾನು ಆ ರೀತಿ ಹೇಳಿಲ್ಲ ಎಂದು ನುಡಿಯುತ್ತಾರೆ.

7. ನಾನು ತಾಳಿಕೋಟೆ ಪಟ್ಟಣ ನೋಡಿದ್ದೇನೆ ಎಂದರೆ ಸರಿ. ತಾಳಿಕೋಟೆಯಿಂದ ವಿಜಯಪುರ 60 ಕಿಮೀ ದೂರ ಇದೆ. ಕಾರಿನಲ್ಲಿ ತಾಳಿಕೋಟೆಯಿಂದ ವಿಜಯಪುರಕ್ಕೆ ಒಂದು ಗಂಟೆಯಲ್ಲಿ ಹೋಗಬಹುದು ಎಂದರೆ ಸರಿ. ದಿನಾಂಕ 28.11.2001 ರಂದು ಮಃ 12.00 ಗಂಟೆ ವರೆಗೆ ವಿಜಯಪುರದಲ್ಲಿ ನನ್ನ ಅಣ್ಣನ ಮಗಳ ಮದುವೆ ಇತ್ತು ಎಂದರೆ ಸರಿ. ಆ ನಂತರ ಒಂದು ಗಂಟೆಯಲ್ಲಿ ನನ್ನ ತಾಯಿ ಹಾಗೂ ಸಹೋದರಿ ಜುಗುಣಬಾಯಿ ರವರು ವಿಜಯಪುರದಿಂದ ತಾಳಿಕೋಟೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಹಾಗೂ ಜುಗುಣಬಾಯಿ ರವರು ಮದುವೆಗೆ ಬಂದಿರಲಿಲ್ಲ, ಅವರು ಗುರುಮಠಕಲಿನಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ದಿಃ 28.11.2001 ರಂದು ನನ್ನ ತಾಯಿ ಹಾಗೂ ಜುಗುಣಬಾಯಿ ರವರು ಉಮಾದೇವಿ ರವರ ಮೂಲಕ ಇಬ್ಬರು ಸಾಕ್ಷಿದಾರರು ಹಾಗೂ ಒಬ್ಬರು ವಕೀಲರನ್ನು ಕರೆಸಿಕೊಡು ತಮ್ಮ ಪಾಲಿನ ಆಸ್ತಿಗಳನ್ನು ವಾದಿಯ ಹೆಸರಿಗೆ ಮರಣಶಾಸನ ಮಾಡಿಸುವ ಇಚ್ಛೆ ವ್ಯಕ್ತ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 28 ಹಾಗೂ 29.11.2001 ರಂದು ಆ ಪ್ರಕಾರ ಮರಣಶಾಸನ ಪತ್ರಗಳನ್ನು ತಯಾರಿಸಿ ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿ ಮುದ್ದೆಬಿಹಾಳ ನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಹುಷಾರಿಲ್ಲದ ಕಾರಣ ಅವರು ಹಾಗೂ ಜುಗುಣಬಾಯಿ ರವರು ಮದುವೆಗೆ ಬಂದಿರಲಿಲ್ಲ. ವಿಭಾಗವಾದ ನಂತರ ನಾನು ಹಾಗೂ ನನ್ನ ಅಣ್ಣನ ಕುಟುಂಬದವರು ನನ್ನ ತಾಯಿ ಹಾಗೂ ಅವಿವಾಹಿತ ಸಹೋದರಿಯರನ್ನು ಸರಿಯಾಗಿ ನೋಡಿಕೊಂಡಿಲ್ಲ ಎಂದರೆ

ಸರಿಯಲ್ಲ. ನನ್ನ ಹೆಂಡತಿ ನನ್ನ ತಾಯಿ ಮತ್ತು ಅವಿವಾಹಿತ ಸಹೋದರಿಯರನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಮಾತು ಕೇಳಿ ನಾನು ಸಹ ನನ್ನ ತಾಯಿ ಹಾಗೂ ಸದರಿ ಸಹೋದರಿಯನ್ನು ಕಂಡರೆ ಸೇರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಹೆಂಡತಿ ಮಕ್ಕಳು ಸಹ ನನ್ನ ತಾಯಿ ಹಾಗೂ ಸದರಿ ಸಹೋದರಿಯರನ್ನು ಸರಿಯಾಗಿ ನೋಡಿಕೊಂಡಿಲ್ಲ ಮತ್ತು ಅವರೊಂದಿಗೆ ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ನನ್ನ ಅಣ್ಣನ ಕುಟುಂಬದವರು ನನ್ನ ತಾಯಿ ಹಾಗೂ ಸಹೋದರಿಯರನ್ನು ಚೆನ್ನಾಗಿ ನೋಡಿಕೊಳ್ಳದ ಕಾರಣ ನನ್ನ ತಾಯಿ ಹಾಗೂ ಜುಗುಣಬಾಯಿ ರವರು ತಮ್ಮ ಆಸ್ತಿಗಳು ನನಗೆ ಮತ್ತು ನನ್ನ ಅಣ್ಣನ ಕುಟುಂಬದವರಿಗೆ ಸೇರಬಾರದು ಎಂಬ ಉದ್ದೇಶದಿಂದ ವಾದಿಯ ಹೆಸರಿಗೆ ಮರಣಶಾಸನ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಕ್ಕನ ಗಂಡ ಪ್ರೇಮ್ ಪ್ರಸಾದ್ ರವರು ದಾಖಲೆಗಳನ್ನು ತಯಾರಿಸಿದ್ದಾರೆ ಎಂದು ನುಡಿಯುತ್ತಾರೆ.

8. ಜುಗುಣಬಾಯಿ ರವರು 2003 ರಲ್ಲಿ ಮರಣಹೊಂದಿದ್ದಾರೆ ಎಂದರೆ ಸರಿ. ಜುಗುಣಬಾಯಿ ರವರಿಗೆ ನನ್ನ ತಾಯಿ ಮಾತ್ರ ವಾರಸುದಾರರಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ ಸಹೋದರಿ ತಮ್ಮ ಪಾಲಿನ ಎಲ್ಲ ಆಸ್ತಿಗಳನ್ನು ವಾದಿಗೆ ಮರಣಶಾಸನದ ಮೂಲಕ ನೀಡಿರುವುದರಿಂದ ವಾದಿಯೇ ಎಲ್ಲ ದಾವಾ ಆಸ್ತಿಗಳ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ಮರಣಶಾಸನದ ಮೂಲಕ ವಾದಿಗೆ ಬಂದಿರುವ ಆಸ್ತಿಗಳನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ